# <u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1291 |
| ಸದಸ್ಯರ ಹೆಸರು | ಡಾ|| ಎಂ.ಜಿ.ಮುಳೆ |
| ಉತ್ತರಿಸುವ ದಿನಾಂಕ | 19.03.2025 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

<table>
<tr><th>ಕ್ರ.<br>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಮಂತ್ರಾಲಯದಲ್ಲಿರುವ ಕರ್ನಾಟಕ ಭವನದಲ್ಲಿ ಒಟ್ಟು ಎಷ್ಟು ವರ್ಗದ ಕೊಠಡಿಗಳಿವೆ;</td><td>ಆಂಧ್ರಪ್ರದೇಶ ಮಂತ್ರಾಲಯದಲ್ಲಿರುವ ಕರ್ನಾಟಕ ರಾಜ್ಯ ಛತ್ರ / ಭವನದಲ್ಲಿ ಈ ಕೆಳಕಂಡಂತೆ ಕೊಠಡಿಗಳಿರುತ್ತವೆ:-
<table>
<tr><th colspan="2">ಕೊಠಡಿಗಳ ವಿವರ</th><th>ಸಂಖ್ಯೆ</th></tr>
<tr><td rowspan="5">ಹಳೆ ಕಟ್ಟಡ</td><td>ಸಾಮಾನ್ಯ ಕೊಠಡಿಗಳು</td><td>24</td></tr>
<tr><td>ಡಿಲಕ್ಸ್ ಕೊಠಡಿಗಳು</td><td>13</td></tr>
<tr><td>ಹವಾ ನಿಯಂತ್ರಣ ಕೊಠಡಿಗಳು</td><td>11</td></tr>
<tr><td>ವಿ.ಐ.ಪಿ.ಕೊಠಡಿಗಳು</td><td>04</td></tr>
<tr><td>ಕಲ್ಯಾಣ ಮಂಟಪ</td><td>01</td></tr>
<tr><td></td><td></td><td></td></tr>
<tr><td rowspan="3">ಹೊಸ ಕಟ್ಟಡ</td><td>ಡಿಲಕ್ಸ್ (ನೆಲ ಮಹಡಿ)</td><td>30</td></tr>
<tr><td>ಡಿಲಕ್ಸ್ (ಮೊದಲನೆ ಮಹಡಿ)</td><td>10</td></tr>
<tr><td>ಹವಾ ನಿಯಂತ್ರಣ (ಮೊದಲನೆ ಮಹಡಿ)</td><td>10</td></tr>
</table></td></tr>
<tr><td>ಆ)</td><td>ಕರ್ನಾಟಕದಿಂದ ಪ್ರತಿನಿತ್ಯ ಸಾವಿರಾರು ಜನರು ಮಂತ್ರಾಲಯಕ್ಕೆ ಹೋಗುತ್ತಿದ್ದು, ಕರ್ನಾಟಕ ಭವನದಲ್ಲಿ ವಸತಿ ಸೌಕರ್ಯ ಸಿಗದೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಸರ್ಕಾರದ ಗಮನಕ್ಕೆ ಬಂದಿರುತ್ತದೆ.</td></tr>
<tr><td>ಇ)</td><td>ಮಂತ್ರಾಲಯದ ಕರ್ನಾಟಕ ಭವನದಲ್ಲಿ ಹೊಸದಾಗಿ ಕಟ್ಟಡ ನಿರ್ಮಿಸಿ ಕರ್ನಾಟಕದಿಂದ</td><td>ಮಂತ್ರಾಲಯದ ಕರ್ನಾಟಕ ರಾಜ್ಯ ಛತ್ರದ ಆವರಣದಲ್ಲಿ ಹೊಸದಾಗಿ 50 ಕೊಠಡಿಗಳ ಅತಿಥಿಗೃಹ</td></tr>
</table>

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| | ಹೋಗುವ ಜನರಿಗೆ ಹೆಚ್ಚು ಸುಸಜ್ಜಿತ ಕೊಠಡಿಗಳನ್ನು ಹಂಚಿಕೆ ಮಾಡಲು ವ್ಯವಸ್ಥೆ ಮಾಡಲಾಗುವುದೆ? | ಕಟ್ಟಡ ನಿರ್ಮಿಸಿ ಕರ್ನಾಟಕದಿಂದ ಹೋಗುವ ಜನರಿಗೆ ಕೊಠಡಿಗಳನ್ನು ಹಂಚಿಕೆ ಮಾಡಲಾಗುತ್ತಿದೆ.<br><br>ದಿನಾಂಕ:29.10.2024 ರಂದು ಧಾರ್ಮಿಕ ದತ್ತಿ ಸಚಿವರು ನಡೆಸಿದ ಸಭೆಯಲ್ಲಿ ಚರ್ಚಿಸಿ ಸೂಚಿಸಿರುವಂತೆ, ಕಾರ್ಯಪಾಲಕ ಅಭಿಯಂತರರು, ನಂ.1 ಕಟ್ಟಡಗಳ ವಿಭಾಗ, ಲೋಕೋಪಯೋಗಿ ಇಲಾಖೆ, ಬೆಂಗಳೂರು ಇವರಿಗೆ ಮಂತ್ರಾಲಯ ಕರ್ನಾಟಕ ರಾಜ್ಯ ಛತ್ರದ ಕಟ್ಟಡಗಳ ನಿರ್ಮಾಣದಲ್ಲಿ ನ್ಯೂನ್ಯತೆಗಳ ಬಗ್ಗೆ ಸಭೆಯಲ್ಲಿ ಹಾಜರಿದ್ದ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಪರಿಶೀಲಿಸಿ ವರದಿಯನ್ನು ನೀಡುವಂತೆ ತಿಳಿಸಲಾಗಿರುತ್ತದೆ.<br>ದಿನಾಂಕ:16.11.2024 ರಂದು ಧಾರ್ಮಿಕ ದತ್ತಿ ಆಯುಕ್ತರು ಕರ್ನಾಟಕ ರಾಜ್ಯ ಛತ್ರಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲಿಸಿದ್ದು, ಹಳೆಯ ಕಟ್ಟಡದಲ್ಲಿ ಒಳಚರಂಡಿ ವ್ಯವಸ್ಥೆ ಮತ್ತು ನೀರಿನ ವ್ಯವಸ್ಥೆಯು ಸಂಪೂರ್ಣ ಹಾಳಾಗಿದ್ದುದರಿಂದ, ಸದರಿ ಕಟ್ಟಡದ ಯಾವುದೇ ಕೊಠಡಿಗಳನ್ನು ಯಾತ್ರಾರ್ಥಿಗಳಿಗೆ ನೀಡಲಾಗುತ್ತಿರುವುದಿಲ್ಲ.<br>ಈತನ್ಮಧ್ಯೆ, ದಿನಾಂಕ: 25.02.2025 ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ಮತ್ತೊಂದು ಸಭೆಯನ್ನು ನಡೆಸಿ ಹಳೆ ಕಟ್ಟಡದ ದುರಸ್ತಿ/ನವೀಕರಣ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ, ಈ ಬಗ್ಗೆ ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ಇವರು ಸ್ಥಳ ಪರಿಶೀಲನೆ ನಡೆಸಿ ಅವಶ್ಯ ಕಾಮಗಾರಿಗೆ ಅಂದಾಜುಪಟ್ಟಿಯನ್ನು ಸಂಬಂಧಪಟ್ಟವರಿಂದ ಪಡೆದು ನಿಯಮಾನುಸಾರ ಸೂಕ್ತ ಪ್ರಸ್ತಾವನೆ ಸಲ್ಲಿಸುವಂತೆ ವಿ.ಸಿ.ಮುಖೇನ ಹಾಜರಿದ್ದು ಜಿಲ್ಲಾದಿಕಾರಿಗಳವರಿಗೆ ಸೂಚಿಸಲಾಗಿರುತ್ತದೆ. |

ಸಂಖ್ಯೆ: ಕಂಇ 100 ಮುಸಪ್ರ 2025

**(ರಾಮಲಿಂಗಾರೆಡ್ಡಿ)**

ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು